

ಅಲ್ಲಲ್ಲಿ ನೆಲೆನಿಂತ ನೀಲಿ ನೀರಿನ ಚೆಲುವಾದ ಸರೋವರದ ಮಡಿಲುಗಳ ನೋಡುವುದೇ ಕಣ್ಣಿಗೆ ಹಬ್ಬ.

ಥಂಡಿ ಹೆಚ್ಚಿರುವ, ಮಂಜು ಬೀಳುವ ಇಂತಹ ಜಾಗಗಳಿಗೆ ಹೋದರೆ ನಮ್ಮ ಕ್ಯಾಮೆರಾಗಳಿಗೆ ಅಪಾಯ ಜಾಸ್ತಿ. ಆಗ ಅವುಗಳನ್ನು ಎಳೆ ಮಕ್ಕಳಂತೆ ಬೆಚ್ಚಗಿಟ್ಟು ಬಲು ಜಾಗ್ರತೆ ಮಾಡಿಕೊಳ್ಳಬೇಕು. ಸುರಿವ ಮಳೆಗೆ, ತಂಪು ಗಾಳಿಗೆ, ಕ್ಯಾಮೆರಾ ಮತ್ತು ಲೆನ್ಸ್ ಎರಡಕ್ಕೂ ಫಂಗಸ್ ರೋಗ ತಗಲುವ ರಿಸ್ಕ್ ಹೆಚ್ಚು. ಹೀಗಾಗಿ ದಿನಾ ರಾತ್ರಿ ಹೀಟರ್ ಹಾಕಿ ಅವುಗಳಿಗೂ ಚಳಿ ಕಾಯಿಸುತ್ತಿದ್ದೆವು. ಶೀತದ ಗಾಳಿ ರೂಮಿನೊಳಗೂ ನುಗ್ಗಿ ಬಂದು ನಿರಂತರ ಹಲ್ಲೆ ಮಾಡಿ ಬೆದರಿಸುತ್ತಿತ್ತು.

ಸೋಜಿಗವೆಂದರೆ ಇಲ್ಲಿ ಟೀ ಮಾರುವ ಅಂಗಡಿ ಹುಡುಗನೂ ವಲಸೆ ಬರುವ ಹಕ್ಕಿಗಳ ಹೆಸರುಗಳನ್ನು ಪಟಪಟನೆ ಮಗ್ಗಿಯಂತೆ ಹೇಳುತ್ತಿದ್ದ. ಸ್ಕೂಲಿಗೆ ಹೋಗುತ್ತಿದ್ದ ಒಬ್ಬ ಪೋರನ ಹಿಡಿದು ಸುಮ್ಮನೆ ಮಾತಾಡಿಸಿದೆ. "ನೀನು ಓದಿ ಮುಂದೇನಾಗುತ್ತೀಯಾ?" ಎಂದು ಮಾಮೂಲಿ ಪ್ರಶ್ನೆ ಕೇಳಿದೆ. ಅದಕ್ಕವನು ಕೊಂಚವೂ ತಡಬಡಿಸದೆ "ಬರ್ಡ್ ಗೈಡ್" ಆಗುತ್ತೀನಿ ಎಂದ. ರಸ್ತೆ ಬದಿ ಕಡ್ಲೆಕಾಯಿ ಮಾರುವ ಹುಡುಗನೂ "ನಾನು ದೊಡ್ಡವನಾಗಿ ದೊಡ್ಡ ನ್ಯಾಚುರಲಿಸ್ಟ್ ಆಗಿ ಕಾಸು ಮಾಡುತ್ತೇನೆ" ಎಂದು ನಕ್ಕ. ಒಂದರ್ಥದಲ್ಲಿ ಹಕ್ಕಿ ಫೋಟೊ ತೆಗೆಯಲು ನಮ್ಮಂಥ ತಿಕ್ಲುಗಳು ಬಂದು ಬಂದೂ ಇಲ್ಲಿನ ಜನರನ್ನೇ ಹಾಳು ಮಾಡಿದ್ದಾರಲ್ಲ ಎಂದೆನಿಸಿತು! ಮತ್ತೊಂದು ಕಡೆ ನಾವು ಉಚ್ಚರಿಸಲು ಹೆಣಗಾಡುವ ಪಕ್ಷಿಗಳ ಆಂಗ್ಲ ಹೆಸರುಗಳನ್ನು ಇಷ್ಟೊಂದು ಸುಲಲಿತವಾಗಿ ಹೇಳುವುದು ಅಚ್ಚರಿಯಾಗಿ ಕಾಣುತ್ತಿತ್ತು.

ಪ್ರವಾಸಿಗರು ಹೆಚ್ಚಾಗಿ ಹೋಗುವ ಊರುಗಳು ಒಂದು ಬಗೆಯಲ್ಲಿ ಹೀಗೆ ನಾಶವೂ ಆಗಿಬಿಡುತ್ತವೆ. ತಮ್ಮ ಸ್ವಂತಿಕೆ ಕಳಕೊಂಡು ಬಂದವರ ಬೆನ್ನು ಕೆರೆದು ಹಣ ಸಂಪಾದಿಸುವ ಕೈಗಳಾಗಿ ಬದಲಾಗುತ್ತವೆ. ಹೊರಗಿನಿಂದ ಬಂದವರ ಬೇಕುಗಳ ಅರಿತು ಅದನ್ನು ಪೂರೈಸುವ ಕಾಯಕಗಳ ಜನ ರೂಪುಗೊಳ್ಳುತ್ತಾರೆ. ಇದು ಅವರಿಗೆ ಅನಿವಾರ್ಯವೂ ಹೌದು. ಪ್ರವಾಸಿ ತಾಣಗಳ ಈ ರೂಪಾಂತರ ಸರಿಯೋ? ತಪ್ಪೋ? ಹೇಳುವುದು ಕಷ್ಟ. "ಒಂದು ದಿನ ಪಕ್ಷಿಗಳು ಇಲ್ಲಿಗೆ ವಲಸೆ ಬರುವುದೇ ನಿಲ್ಲಿಸಿದರೆ ಏನು ಗತಿ" ಎಂದು ನಮ್ಮ ಡ್ರೈವರನ್ನು ಪ್ರಶ್ನಿಸಿದೆ. ತಬ್ಬಿಬ್ಬಾದ ಅವನು ಹಣೆ ಚಚ್ಚಿಕೊಂಡು "ಥೂ ಬಿಡ್ತು ಅನ್ನಿ ಸರ್. ಎಂಥ